ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 11–8–2017

# ಪತ್ರಿಕಾ ಆಮಂತ್ರಣ

1. ಕರ್ನಾಟಕ ಲಲಿತಕಲಾ ಅಕಾಡೆಮಿ ಪುಸ್ತಕಗಳ ಲೋಕಾರ್ಪಣೆ:

ಉದ್ಘಾಟನೆ:

ಐ.ಎಂ. ವಿಠ್ಠಲಮೂರ್ತಿ,
ನಿವೃತ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:

ಡಾ: ಎಂ.ಎಸ್. ಮೂರ್ತಿ,
ಅಧ್ಯಕ್ಷರು,
ಕರ್ನಾಟಕ ಲಲಿತಕಲಾ ಅಕಾಡೆಮಿ
ದಿನಾಂಕ: 12–8–2017 ಶನಿವಾರ ಸಮಯ: 11–00 ಗಂಟೆಗೆ
ಸ್ಥಳ: ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

2. **Diploma in Agricultural Extension Service for Input Dealers**

**Inauguration:**

**Smt. V. Usharani, IAS.,**
**Director-General, Manage Hyderabad**

**Chief Guests:**

**Dr. H. Shivanna,**
**Vice-Chancellor, UAS, Bangalore**
**Sri M. Maheshwara Rao, IAS**
**Secretary, Department of Agriculture**

**Date: 13-08-2017 Sunday Time: 10-30 a.m.**
**Venue: Institution of Agricultural Technologists, Queens Road, Bangalore**

**3.** ಅಖಿಲ ಭಾರತ ಭಾಷಾ ಸೌಹಾರ್ದ ದಿನಾಚರಣೆ:
ಬಹುಭಾಷಾ ಗಾಯನ, ಬಹುಭಾಷಾ ಕವಿಗೋಷ್ಠಿ ಮತ್ತು ಬಹುಭಾಷಾ ಜಾನಪದ ವೈವಿಧ್ಯ ಕಾರ್ಯಕ್ರಮ:
ಉದ್ಘಾಟನೆ:
ಡಾ. ಅಜಯ್‌ಕುಮಾರ್ ಸಿಂಗ್,
ನಿವೃತ್ತ ಮಹಾ ನಿರ್ದೇಶಕರು ಹಾಗೂ ಸಾಹಿತಿಗಳು
ಅಧ್ಯಕ್ಷತೆ:
ಡಾ. ಸಿದ್ದಲಿಂಗಯ್ಯ, ಹಿರಿಯ ಸಾಹಿತಿಗಳು
ದಿನಾಂಕ: 13-8-2017 ಭಾನುವಾರ ಸಮಯ: ಅಪರಾಹ್ನ 12.00 ಗಂಟೆಗೆ
ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

## ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ

ರಾಜ್ಯ ಜಲಸಂಪನ್ಮೂಲ ಇಲಾಖೆಯ ವತಿಯಿಂದ ಬೆಂಗಳೂರಿನ ಮಾಧ್ಯಮ ಸಂಸ್ಥೆಗಳ ವರದಿಗಾರರನ್ನು ಎರಡು ದಿನಗಳ ಕಾಲ (ಆಗಸ್ಟ್ 16 ಮತ್ತು 17, 2017 ರಂದು)ಆಲಮಟ್ಟಿ, ಕೂಡಲಸಂಗಮ ಪ್ರವಾಸ ಕಾರ್ಯಕ್ರಮಕ್ಕೆ ಆಹ್ವಾನಿಸಿದೆ.

ಆಗಸ್ಟ್ 15 ರಂದು ರಾತ್ರಿ 8-30 ಗಂಟೆಗೆ ಬೆಂಗಳೂರಿನಿಂದ ಹೊರಟು ದಿನಾಂಕ: 16-8-2017 ಬೆಳಿಗ್ಗೆ ಆಲಮಟ್ಟಿ ತಲುಪಿ ಬೆ. 10.30ಕ್ಕೆ ರಾಷ್ಟ್ರೀಯ ಜಲ ಸಮ್ಮೇಳನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದು. ಅಂದು ಮಧ್ಯಾಹ್ನ 1-30 ಗಂಟೆಯಿಂದ ಆದಿಲ್ ಶಾಹಿ ಕಾಲದ ನಗರ ನೀರು ಸರಬರಾಜು ವ್ಯವಸ್ಥೆಯ ಜೀರ್ಣೋದ್ಧಾರ ಕಾಮಗಾರಿಗಳ ಮತ್ತು ಕೃಷ್ಣ ನದಿಯಿಂದ ತುಂಬಿಸಲಾದ ಕೆರೆಗಳ ವೀಕ್ಷಣೆ ಹಾಗೂ ಆಲಮಟ್ಟಿ ವಾಸ್ತವ್ಯ.

ಆಗಸ್ಟ್ 17 ರಂದು ಬೆಳಿಗ್ಗೆ 10.30ಕ್ಕೆ ಕೂಡಲ ಸಂಗಮ ಭೇಟಿ . ಮಧ್ಯಾಹ್ನ 1 ಗಂಟೆಗೆ ಏಷ್ಯಾದಲ್ಲಿಯೇ ಅತಿ ವಿಸ್ತೃತವಾದ ರಾಮಥಾಳ ಸೂಕ್ಷ್ಮ ನೀರಾವರಿ ಯೋಜನಾ ಪ್ರದೇಶಕ್ಕೆ ಭೇಟಿ ಅಂದು ರಾತ್ರಿ 9-00 ಗಂಟೆಗೆ ಬೆಂಗಳೂರಿಗೆ ನಿರ್ಗಮನ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ತಮ್ಮ ಸಂಸ್ಥೆಯಿಂದ ಮಾನ್ಯತೆ ಪಡೆದ ವರದಿಗಾರರು/ಛಾಯಾಗ್ರಾಹಕರನ್ನು ಕಳುಹಿಸಿಕೊಡಲು ಕೋರಿದೆ.

ತಾವು ನಿಯೋಜಿಸುವ ಪತ್ರಕರ್ತರ ಮಾಹಿತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯ ವಾರ್ತಾ ಸಹಾಯಕ ಶ್ರೀ ಜಡಿಯಪ್ಪ ಗೆದ್ಲಗಟ್ಟಿ (ಮೊಬೈಲ್ 9480841211 ) ಇವರಿಗೆ ದಿನಾಂಕ 14-8-2017 ರಂದು ಸಂಜೆ 5-00 ಗಂಟೆಯೊಳಗೆ ಕಳುಹಿಸಲು ಕೋರಿದೆ.

## ಪತ್ರಿಕಾ ಪ್ರಕಟಣೆ

## ಶಿಕ್ಷಕರ ಮಕ್ಕಳಿಗೆ ಪ್ರತಿಭಾವಂತ ವಿದ್ಯಾರ್ಥಿ ವೇತನ

**ಬೆಂಗಳೂರು ಆಗಸ್ಟ್ 11 (ಕರ್ನಾಟಕ ವಾರ್ತೆ)**

**2017–2018ನೇ ಸಾಲಿಗೆ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ಜಿಲ್ಲಾ ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ಅತಿ ಹೆಚ್ಚು ಅಂಕ ಪಡೆದ ಶಿಕ್ಷಕರು/ನಿವೃತ ಶಿಕ್ಷಕರ ಮಕ್ಕಳಿಗೆ "ಪ್ರತಿಭಾವಂತ ವಿದ್ಯಾರ್ಥಿ ವೇತನ" ಮಂಜೂರು ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**2016–2017ನೇ ಸಾಲಿನಲ್ಲಿ ಮಾರ್ಚ್/ ಏಪ್ರಿಲ್ 2017 ರಲ್ಲಿ ನಡೆದ ಎಸ್.ಎಸ್.ಎಲ್.ಸಿ/ ದ್ವಿತೀಯ ಪಿ.ಯು.ಸಿ./ ಪದವಿ ಅಂತಿಮ ವರ್ಷ (ಬಿ.ಎ/ ಬಿ.ಎಸ್ಸಿ/ ಬಿ.ಕಾಂ/ ಬಿ.ಇಡಿ/ ಬಿ.ಸಿ.ಎ/ ಬಿ.ಬಿ.ಎಂ/ ಬಿ.ಹೆಚ್.ಎಂ/ ಎಲ್.ಎಲ್.ಬಿ), ಇಂಜಿನಿಯರಿಂಗ್ (ಬಿ.ಇ. 6ನೇ ಸೆಮಿಸ್ಟರ್ ಪರೀಕ್ಷೆ), ವೈದ್ಯಕೀಯ (ಎಂ.ಬಿ.ಬಿ.ಎಸ್. 2ನೇ ಫೇಸ್) ಮತ್ತು ಪ್ರಥಮ ವರ್ಷದ ಸ್ನಾತಕೋತ್ತರ ಪರೀಕ್ಷೆ (ಎಂ.ಎ./ ಎಂ.ಸ್ಸಿ./ ಎಂ.ಕಾಂ./ ಎಂ. ಎಡ್.) ಪರೀಕ್ಷೆಗಳಲ್ಲಿ ಕನಿಷ್ಠ ಶೇಕಡ 60 ಅಂಕಗಳನ್ನು ಪಡೆದು ತಮ್ಮ ವ್ಯಾಸಂಗವನ್ನು ಮುಂದುವರೆಸಿರುವಂತಹ ವಿದ್ಯಾರ್ಥಿಗಳು (ಶಿಕ್ಷಕರ ಮಕ್ಕಳು ಮಾತ್ರ) ನಿಗಧಿತ ಅರ್ಜಿಗಳನ್ನು ದೃಢೀಕರಿಸಿದ ಅಂಕ ಪಟ್ಟಿಯೊಂದಿಗೆ ಸಲ್ಲಿಸಬಹುದಾಗಿದೆ.**

**ಅರ್ಜಿಗಳನ್ನು ಪರಿಶೀಲಿಸಿ ಮೆರಿಟ್ ಆಧಾರದ ಮೇಲೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗುವುದು. ಅರ್ಜಿ ನಮೂನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲದಿಂದ (www.schooleducation.kar.nic.in) ಡೌನ್ ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ದಿ.31.10.2017 ಅಂತಿಮ ದಿನಾಂಕವಾಗಿರುತ್ತದೆ.**

**46/46**

## ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬಾಲ ಭವನದಿಂದ ಮಕ್ಕಳಿಗಾಗಿ ಸ್ಪರ್ಧೆ

**ಬೆಂಗಳೂರು ಆಗಸ್ಟ್ 11 (ಕರ್ನಾಟಕ ವಾರ್ತೆ)**

**ಬಾಲಭವನವು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ದಿನಾಂಕ 15–08–2017 ರಂದು 05–16 ವರ್ಷದ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಬೆಳಿಗ್ಗೆ 11:00 ಗಂಟೆಗೆ ಬಾಲ ಭವನ, ಕಬ್ಬನ್ ಉದ್ಯಾನವನದಲ್ಲಿ ಏರ್ಪಡಿಸಿದೆ.**

ಸ್ಪರ್ಧೆಗಳಲ್ಲಿ ಆಸಕ್ತ ಮಕ್ಕಳು ದಿನಾಂಕ: 13-08-2017 ರ ಒಳಗೆ ವಿವರಗಳನ್ನು ಕಛೇರಿಯಲ್ಲಿ ನೋಂದಾಯಿಸಲು ಕೋರಿದೆ.(ರಜಾ ದಿನಗಳನ್ನು ಹೊರತು ಪಡಿಸಿ)

ಸ್ಪರ್ಧೆಗೆ ಭಾಗವಹಿಸಿವ ಮಕ್ಕಳು ಅರ್ಧ ಗಂಟೆಗೆ ಮುಂಚಿತವಾಗಿ ಹಾಜರಿರತಕ್ಕದ್ದು, ವಿಜೇತ ಮಕ್ಕಳಿಗೆ ಬಹುಮಾನ ಹಾಗೂ ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೆ ಪ್ರಮಾಣ ಪತ್ರವನ್ನು ಸಂಜೆ: 3:30 ಕ್ಕೆ ವಿತರಿಸಲಾಗುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಂಜೆ: 4:00 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಛೇರಿ, ಬಾಲಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ : 080-22861423/ 228664189 ರ ಮೂಲಕ ಸಂಪರ್ಕಿಸಿ ಹಾಗೂ ವೆಬ್ ಸೈಟ್ secybalbhavan.bang@gmail.com ವೀಕ್ಷಿಸಬಹುದಾಗಿದೆ.

47/47

# ಲೋಕ್ ಅದಾಲತ್

ಬೆಂಗಳೂರು ಆಗಸ್ಟ್ 11 (ಕರ್ನಾಟಕ ವಾರ್ತೆ)

"ಸರ್ವರಿಗೂ ನ್ಯಾಯ" ಎಂಬುದು ಭಾರತದ ಕಾನೂನು ಸೇವೆಗಳ ಧ್ಯೇಯವಾಗಿದೆ. ಯಾವೊಬ್ಬ ಪ್ರಜೆಯು ತನ್ನ ಆರ್ಥಿಕ ಅಥವಾ ಇತರೆ ದೌರ್ಭಲ್ಯಗಳ ಕಾರಣಗಳಿಂದಾಗಿ ನ್ಯಾಯ ಪಡೆಯುವುದರಿಂದ ವಂಚಿತನಾಗಬಾರದೆಂದು ಉಚಿತ ಮತ್ತು ಸಮಕ್ಷ ಕಾನೂನು ಸೇವೆಗಳನ್ನು ಸಮಾಜದ ದುರ್ಬಲ ವರ್ಗಗಳಿಗೆ ಒದಗಿಸುವ ಸಲುವಾಗಿ ಜನತಾ ನ್ಯಾಯಾಲಯಗಳನ್ನು ವ್ಯವಸ್ಥೆಗೊಳಿಸಲು ಹಾಗೂ ಸಮಾನ ಅವಕಾಶಗಳ ಆದಾರದ ಮೇಲೆ ನ್ಯಾಯಾಂಗ ವ್ಯವಸ್ಥೆ ಕಾರ್ಯ ನಿರ್ವಹಿಸಿ ನ್ಯಾಯ ಒದಗಿಸುವಂತೆ ಮಾಡುವ ಶ್ರೇಷ್ಠ ಉದ್ದೇಶದಿಂದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. ಜಾತಿ ಮತಾಭಿಪ್ರಾಯ ಆಥವಾ ಧರ್ಮ ಯಾವುದೇ ಆಗಿದ್ದರೂ ಸಹ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯುವಂತಾಗಬೇಕು.

ಜನಸಾಮಾನ್ಯರಿಗೆ ಅತಿತ್ವರಿತ ಹಾಗೂ ವೆಚ್ಚವಿಲ್ಲದೆ ನ್ಯಾಯ ದೊರಕಿಸಲು ಜನತಾ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಇದರ ಪರಿಣಾಮವಾಗಿ ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳ ಪರಿಣಾಮದ ಮೇಲೆ ಪರಿಣಾಮ ಬೀರಿದೆ. ನ್ಯಾಯಾಲಯದ ಮೊರೆ ಹೋಗದೆ ಹಾಗೂ ಹೆಚ್ಚು ಸಮಯ ಬೇಕಿರದ ಪ್ರಕರಣಗಳನ್ನು ನ್ಯಾಯಾಂಗ ವ್ಯವಸ್ಥೆಯಿಂದ ಇತ್ಯರ್ಥಪಡಿಸುವಲ್ಲಿ ಜನತಾ ನ್ಯಾಯಾಲಯ ಒಂದು ಸಶಕ್ತ ಆಯುಧವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಉದ್ದೇಶವನ್ನಿಟ್ಟುಕೊಂಡು ರಾಷ್ಟ್ರೀಯ ಕಾನೂನು

ಸೇವಾ ಪ್ರಾಧಿಕಾರದವರು ಲೋಕ್ ಅದಾಲತನ್ನು ಏರ್ಪಡಿಸಲು ನಿರ್ಧರಿಸಲಾಗಿದ್ದು, ಸದರಿ ರಾಷ್ಟ್ರೀಯ ಲೋಕ್ ಅದಾಲತ್‍ನಲ್ಲಿ ಎಲ್ಲಾ ರೀತಿಯ ವ್ಯಾಜ್ಯ ಪೂರ್ವ ಹಾಗೂ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಗೌರವಾನ್ವಿತ ಕಾರ್ಯನಿರ್ವಾಹಕ ಅಧ್ಯಕ್ಷರ ನಿರ್ದೇಶನದಂತೆ ಉಚ್ಚನ್ಯಾಯಾಲಯ ಕಾನೂನು ಸೇವಾ ಸಮಿತಿ. ಎಲ್ಲಾ ಜಿಲ್ಲಾ ಕಾನೂನು ಸೇವಾ ಪ್ರಧಿಕಾಗಳು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳು ಮತ್ತು ಖಾಯಂ ಜನತಾ ನ್ಯಾಯಾಲಯಗಳಲ್ಲಿ ಪ್ರತೀ ಎರಡು ತಿಂಗಳಿಗೆ ಒಂದು ದ್ವಿಮಾಸಿಕ ಜನತಾ ನ್ಯಾಯಾಲಯವನ್ನು ಹಮ್ಮಿಕೊಳ್ಳಲಾಗಿದೆ.

ಈ ಹಿನ್ನಲೆಯಲ್ಲಿ, 2017 ನೇ ಸಾಲಿನಲ್ಲಿ ಜನವರಿ 2017 ರಿಂದ ಜುಲೈ 2017 ರವರೆಗೆ ನ್ಯಾಯಾಲಯದಲ್ಲಿ ಬಾಕಿ ಇದ್ದಂತಹ 39,292 ಪ್ರಕರಣಗಳನ್ನು ಹಾಗೂ 18,689 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್ ನಲ್ಲಿ ಇತ್ಯರ್ಥಪಡಿಸಲಾಗಿದೆ ಹಾಗೂ ನ್ಯಾಯಾಲಯದಲ್ಲಿ ಬಾಕಿ ಇದ್ದ 26,667 ಪ್ರಕರಣಗಳನ್ನು ಮತ್ತು 5.97.615 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ದ್ವಿಮಾಸಿಕ ಲೋಕ್ ಅದಾಲತ್‍ನಲ್ಲಿ ಇತ್ಯರ್ಥಪಡಿಸಲಾಗಿದೆ.

ದಿನಾಂಕ: 12/08/2017 ರಂದು ನಡೆಯಲಿರುವ ದ್ವಿಮಾಸಿಕ ಲೋಕ್ ಅದಾಲತ್ ಹಾಗೂ 09/09/2017 ರಂದು ನಡೆಯಲ್ಲಿರುವ ರಾಷ್ಟ್ರೀಯ ಲೋಕ್ ಅದಾಲತ್ ನಲ್ಲಿ ಸಾರ್ವಜನಿಕರು ಅವರ ವಿವಾದ/ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ರಾಷ್ಟ್ರೀಯ ಕಾನೂನು ಸೇವಾ ಸಮಿತಿ/ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು/ ತಾಲ್ಲೂಕು ಕಾನೂನು ಸೇವಾ ಸಮಿತಿಗಳನ್ನು ಹಾಗೂ ಖಾಯಂ ಜನತಾ ನ್ಯಾಯಾಲಯಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಕಟಣೆ ತಿಳಿಸಿದೆ.

**48/48**

# ಧನ ಸಹಾಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು ಆಗಸ್ಟ್ 11 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2017-18 ನೇ ಸಾಲಿನ ಕನ್ನಡ ಅಭಿವೃದ್ಧಿ ಯೋಜನೆಯಡಿ ಹಲವು ಯೋಜನೆಗಳಿಗೆ ಧನ ಸಹಾಯ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ

2016-17ನೇ ಸಾಲಿನಲ್ಲಿ ಯಾವುದೇ ವಿಶ್ವವಿದ್ಯಾಲಯಗಳಿಂದ ಯಾವುದೇ ವಿಷಯದ ಬಗ್ಗೆ ಕನ್ನಡದಲ್ಲಿ ಪಿ.ಎಚ್.ಡಿ, ಎಂ.ಫಿಲ್ ಪದವಿ ಪಡೆದ ಪ್ರಬಂಧಗಳ ಮುದ್ರಣಕ್ಕೆ ಧನ ಸಹಾಯಕ್ಕಾಗಿ ಅರ್ಜಿಗಳನ್ನು www.kannadasiri.co.in ನಲ್ಲಿ ದಿನಾಂಕ:07-08-2017 ರಿಂದ 02-09-2017 ವರೆಗೆ ಆನ್‍ಲೈನ್ ನಲ್ಲಿ ಸಲ್ಲಿಸಬಹುದಾಗಿದೆ.

**2016ರ ಸಾಲಿನಲ್ಲಿ ಪ್ರಕಟಿಸಿರುವ ಸೃಜನೇತರ ಕೃತಿಗಳಿಗೆ ಧನ ಸಹಾಯ ಪಡೆಯಲು www.kannadasiri.co.in ನಲ್ಲಿ ದಿನಾಂಕ: 07-08-2017 ರಿಂದ 02-09-2017 ವರೆಗೆ ಅರ್ಜಿಗಳನ್ನು ಪಡೆದು ಇಲಾಖೆಗೆ ನೇರವಾಗಿ ಆನ್‌ಲೈನ್ ನಲ್ಲಿ ಅರ್ಜಿಗಳನ್ನು ದಿನಾಂಕ: 02-09-2017 ರೊಳಗಾಗಿ ಸಲ್ಲಿಸಬಹುದಾಗಿದೆ.**

**49/49**

## ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು ಆಗಸ್ಟ್ 11 (ಕರ್ನಾಟಕ ವಾರ್ತೆ)

**ಕರ್ನಾಟಕ ಲೋಕಸೇವ ಆಯೋಗವು ಕೈಗಾರಿಕ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ 20+13(ಹೈ.ಕ) ಹುದ್ದೆಗಳ ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ಮಹಾನಗರ ಪಾಲಿಕೆಗಳಲ್ಲಿ ಕಾಮಗಾರಿ ನಿರೀಕ್ಷಕರು 167+44 (ಹೈ.ಕ) ಹುದ್ದೆಗಳು ಮಹಾನಗರ ಪಾಲಿಕೆಗಳಲ್ಲಿ ಕಿರಿಯ ಅಭಿಯಂತರರು (ಎಲೆಕ್ಟ್ರಿಕಲ್) 25+05 (ಹೈ.ಕ) ಹುದ್ದೆಗಳು ಮತ್ತು ನಗರ ಸಭೆ / ಪುರಸಭೆಗಳಲ್ಲಿ ಎಲೆಕ್ಟ್ರೀಷಿಯನ್ ಗ್ರೇಡ್-1 23+06 (ಹೈ.ಕ) ಹುದ್ದೆಗಳಿಗೆ ಆಯೋಗದ ಅಂತರ್ಜಾಲದಲ್ಲಿ ದಿನಾಂಕ: 07-08-2017 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಪ್ರಕಟಿಸಲಾಗಿದೆ. ಪ್ರಕಟಿಸಲಾದ ದಿನಾಂಕದಿಂದ 7 ದಿನಗಳೊಳಗಾಗಿ ಆಕ್ಷೇಪಣೆ ಸಲ್ಲಿಸಬಹುದೆಂದು ಆಯೋಗದ ಪ್ರಕಟಣೆ ತಿಳಿಸಿದೆ.**

**50/50**

# ಮಾಹಿತಿ ಸಲ್ಲಿಸಲು ಮನವಿ

ಬೆಂಗಳೂರು ಆಗಸ್ಟ್ 11 (ಕರ್ನಾಟಕ ವಾರ್ತೆ)

**ದ್ವಿತೀಯ ವಿಶ್ವ ಮಹಾಯುದ್ದದಲ್ಲಿ ಮಡಿದ/ಅಂಗವಿಕಲರಾದ ಮತ್ತು ಈ ಕಾರಣಗಳಿಂದಾಗಿ ಪಿಂಚಣಿ ಪಡೆಯುತ್ತಿರುವ ವಿಧವೆಯರಿಗೆ/ಅಂಗವಿಕಲರಿಗೆ ಲಿಬರಲೈಸ್ಡ್ ಪಿಂಚಣಿ ಮಂಜೂರು ಮಾಡಲು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯು ಮಾಹಿತಿ ಸಂಗ್ರಹಿಸುತ್ತಿದೆ. ದ್ವಿತೀಯ ವಿಶ್ವ ಮಹಾಯುದ್ದದಲ್ಲಿ ಪಾಲ್ಗೊಂಡು ಅಂಗವಿಕಲರಾಗಿ ಪಿಂಚಣಿ ಪಡೆಯುತ್ತಿರುವ ಯೋಧರು ಹಾಗೂ ದ್ವಿತೀಯ ವಿಶ್ವ ಮಹಾಯುದ್ದದಲ್ಲಿ ಪಾಲ್ಗೊಂಡು ಹುತಾತ್ಮರಾದ ಯೋಧರ ಪಿಂಚಣಿ ಪಡೆಯುತ್ತಿರುವ ವಿಧವೆಯರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಬರುವ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಿಲ್ಲಾ ಕಛೇರಿಗೆ ಮಾಹಿತಿಯನ್ನು ಸಲ್ಲಿಸಬೇಕಾಗಿದೆ ಹಾಗೂ ಕರ್ನಾಟಕ ಸರ್ಕಾರದಿಂದ ದ್ವಿತೀಯ ವಿಶ್ವ ಮಹಾಯುದ್ದ ಸಂತ್ರಸ್ಥರಿಗೆ ರೂ 6000/- ಗೌರವಧನ ನೀಡುತ್ತಿದೆ.**

ಕರ್ನಾಟಕ ಸರ್ಕಾರದದಿಂದ ದ್ವಿತೀಯ ಮಹಾಯುದ್ದ ಸಂತ್ರಸ್ಥರಿಗೆ ರೂ. 6,000/- ಗೌರವಧನ ನೀಡುತ್ತಿದೆ. ಈ ಗೌರವಧನ ಪಡೆಯುತ್ತಿರುವವರಿಗೆ ಇದು ಅನ್ವಯಿಸುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

51/51

**ಕನ್ನಡ ಚಲನಚಿತ್ರಗಳನ್ನು ವಿವಿಧ ರಾಜ್ಯಗಳಲ್ಲಿ ಪ್ರದರ್ಶಿಸಲು ಕರ್ನಾಟಕ ಸರ್ಕಾರದ ಸಂಪೂರ್ಣ ಸಹಕಾರ**

**-ಸಚಿವ ಕೆ.ಜೆ. ಜಾರ್ಜ್**

ಬೆಂಗಳೂರು ಆಗಸ್ಟ್ 11 (ಕರ್ನಾಟಕ ವಾರ್ತೆ)

ಕನ್ನಡ ಚಲನಚಿತ್ರಗಳನ್ನು ವಿವಿಧ ರಾಜ್ಯಗಳಲ್ಲಿ ಪ್ರದರ್ಶಿಸಲು ಕರ್ನಾಟಕ ಸರ್ಕಾರ ಸಂಪೂರ್ಣ ಸಹಕಾರವನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಗೆ ನೀಡುತ್ತಿದೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕೇರಳ ಚಲಚಿತ್ರ ಅಕಾಡೆಮಿಯ ಸಹಯೋಗದಲ್ಲಿ ಆಯೋಜಿಸಿರುವ ಮಲಯಾಲಂ ಚಲನಚಿತ್ರೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕನ್ನಡ ಚಿತ್ರೋದ್ಯಮದ ಬೆಳವಣಿಗೆಗೆ ಕರ್ನಾಟಕ ಸರ್ಕಾರ ಸಾಕಷ್ಟು ಪ್ರೋತ್ಸಾಹ ನೀಡಿದೆ. ಭಾಷೆಗಳಲ್ಲಿ ವೈವಿಧ್ಯತೆಗಳಿದ್ದರೂ, ಚಲನಚಿತ್ರಗಳ ಭಾಷೆ ಒಂದೇ. ಚಿತ್ರಗಳಿಗೆ ಟೈಟಲ್ಸ್ ನೀಡುವುದರಿಂದ ಎಲ್ಲ ಭಾಷೆಯ ಚಿತ್ರಗಳನ್ನು ವೀಕ್ಷಿಸಿ ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ ಎಂದರು. ಚಲನಚಿತ್ರಗಳ ಮೂಲಕ ಸಮಾಜದಲ್ಲಿ ಸಾಕಷ್ಟು ಸುಧಾರಣೆಗಳಾಬೇಕು ಎಂದ ಅವರು ಕೇರಳ ಚಿತ್ರೋದ್ಯಮ ಹೃದಯಸ್ಪರ್ಶಿ ಚಿತ್ರಗಳನ್ನು ನೀಡಿದೆ ಎಂದರು. ಕನ್ನಡ ಚಿತ್ರೋದ್ಯಮದ ಅಭಿವೃದ್ದೀಗೆ ಡಾ: ರಾಜ್‌ಕುಮಾರ್ ಅವರ ಕೊಡುಗೆಯನ್ನು ಸ್ಮರಿಸಿದರು.

ಚಿತ್ರೋತ್ಸವದ ಕುರಿತು ಮಾತನಾಡಿದ ಖ್ಯಾತ ಚಲನಚಿತ್ರ ನಿರ್ದೇಶಕರ ಪಿ.ಶೇಷಾದ್ರಿ, ಕರ್ನಾಟಕ ಚಲನಚಿತ್ರ ಅಕಾಡೆಮಿ ಏರ್ಪಡಿಸಿರುವ ಕನ್ನಡ -ಮಲಯಾಳಂ ಚಲನಚಿತ್ರೋತ್ಸವ ಎರಡು ಸಂಸ್ಕೃತಿಗಳ ವಿನಿಮಯಕ್ಕೆ ವೇದಿಕೆಯಾಗಿದೆ ಎಂದರು. 1980 ರಲ್ಲಿ ಮಲಯಾಳಂ ಚಿತ್ರ ನಿರ್ದೇಶಕ ಜಾನ್ ಅಬ್ರಹಾಂ ಅವರ ಚಿತ್ರ ನಿರ್ಮಿಸಲು ಯಾವುದೇ ನಿರ್ಮಾಪಕ ಮುಂದೆ ಬರದಿದ್ದಾಗ, ತಮ್ಮ ಯೂರಿನ ಜನರಿಂದ ಹಣ ಪಡೆದು ಚಿತ್ರ ನಿರ್ಮಿಸಿದರು. ಮಲಯಾಳಂ ಚಿತ್ರ ನಿರ್ದೇಶಕ ಜಯರಾಜ್, ತಮ್ಮ ಕರಣಂ ಚಿತ್ರವನ್ನು ಕೇವಲ 9 ಲಕ್ಷರೂ.ಗಳ ವೆಚ್ಚದಲ್ಲಿ ನಿರ್ಮಿಸಿದ್ದರಿಂದ ಪ್ರೇರಣೆ ಪಡೆದು ತಾವೂ ತಮ್ಮ ಮೊತ್ತಮೊದಲ ಚಿತ್ರವನ್ನು 15 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಿದ್ದನ್ನು ಪಿ.ಶೇಷಾದ್ರಿ ಸ್ಮರಿಸಿಕೊಂಡರು.

ಕೇರಳ ಚಲನಚಿತ್ರಗಳಿಗೆ ಯಾವುದೇ ಸಹಾಯಧನವನ್ನು ಸರ್ಕಾರದಿಂದ ನೀಡಲಾಗುತ್ತಿಲ್ಲ, ಆದರೂ ಅವರ ಚಿತ್ರಗಳ ಗುಣಮಟ್ಟದಲ್ಲಿ ಯಾವುದೇ ರಾಜಿಯಾಗಿಲ್ಲ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರಾದ ಡಾ:ಪಿ.ಎಸ್.ಹರ್ಷಾ ಮಾತನಾಡಿ, ಕಲಾ ಮಾಧ್ಯಮಗಳು ಸಮಾಜ ರೂಪಿಸುವ ಮಹತ್ತರ ಪಾತ್ರ ನಿರ್ವಹಿಸುತ್ತವೆ ಎಂದರು. ಕರ್ನಾಟಕ ಸರ್ಕಾರ

ಚಲನಚಿತ್ರೋದ್ಯಮದ ಬೆಳವಣಿಗೆಗೆ ಪ್ರೋತ್ಸಾಹ ನೀಡುವ ರಾಜ್ಯಗಳಲ್ಲಿ ಕರ್ನಾಟಕ ಸರ್ಕಾರ ಮುಂಚೂಣಿಯಲ್ಲಿದೆ ಎಂದ ಅವರು ಸರ್ಕಾರ ಚಲನಚಿತ್ರೋದ್ಯಮಕ್ಕೆ ನೀಡಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಮಲಯಾಳಂ ಚಿತ್ರ ನಿರ್ದೇಶಕಿ ಕು. ವಿದು ವಿನ್ಸೆಂಟ್ ಮಾತನಾಡಿ ಭಾಷೆ, ಜಾತಿ ಮುಂತಾದ ಎಲ್ಲ ಅಡೆತಡೆಗಳನ್ನು ಕಲೆ ತೊಡೆದುಹಾಕುತ್ತದೆ. ಎಲ್ಲ ಸಂಸ್ಕೃತಿಗಳನ್ನು ಸಿನಿಮಾ ಮಾಧ್ಯಮ ಬೆಸೆಯುತ್ತದೆ ಎಂದರು. ತಮ್ಮ ಚಿತ್ರ 'ಮ್ಯಾನ್‌ಹೋಲ್' ನಲ್ಲಿ ಸಫಾಯಿ ಕರ್ಮಚಾರಿಗಳ ಬದುಕಿನ ಚಿತ್ರಣವನ್ನು ಕಟ್ಟಿಕೊಡಲು ಪ್ರಯತ್ನ ಮಾಡಲಾಗಿದೆ ಎಂದ ಅವರು ತಿರುವನಂತಪುರದಲ್ಲಿ ಕನ್ನಡ ಚಿತ್ರಗಳನ್ನು ವೀಕ್ಷಿಸಲು ಉತ್ಸುಕರಾಗಿರುವುದಾಗಿ ತಿಳಿಸಿದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ರಾಜೇಂದ್ರ ಸಿಂಗ್ ಬಾಬು ಪ್ರಸ್ತಾವಿಕವಾಗಿ ಮಾತನಾಡಿ ಪರಸ್ಪರ ಒಡಂಬಡಿಕೆಯ ಆಧಾರದ ಮೇಲೆ ಮುಂಬೈ ಹಾಗೂ ಹೈದರಾಬಾದ್‌ನಲ್ಲಿಯೂ ಚಲನಚಿತ್ರೋತ್ಸವಗಳನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿ ಹಮ್ಮಿಕೊಂಡಿದೆ ಎಂದರು. ಚೆನ್ನೈ, ಕೋಲ್ಕತ್ತಾ ಹಾಗೂ ದೆಹಲಿಯಲ್ಲಿ ನಡೆದ ಕನ್ನಡ ಚಿತ್ರೋತ್ಸವಗಳು ಅತ್ಯಂತ ಯಶಸ್ವಿಯಾಗಿದೆ ಎಂದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಸಾ.ರಾ.ಗೋವಿಂದು ಮಾತನಾಡಿದರು

ಕಾರ್ಯಕ್ರಮದಲ್ಲಿ ಮಲಯಾಳಂ ಚಿತ್ರ ನಿರ್ದೇಶಕ ದಿಲೀಶ್ ಪೋಥನ್, ಕು.ವಿಧು ವಿನ್ಸೆಂಟ್ ಹಾಗೂ ನಟ ವಿನಯ್ ಫೋರ್ಟ್ ರವರುಗಳನ್ನು ಸನ್ಮಾನಿಸಲಾಯಿತು.

ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಹಾಗೂ ಕೇರಳ ಚಲಚಿತ್ರ ಅಕಾಡೆಮಿ ಉಪನಿರ್ದೇಶಕ ಹೆಚ್. ಶಾಜಿ ಉಪಸ್ಥಿತರಿದ್ದರು.

ಅಪರ್ಣಾ ಕಾರ್ಯಕ್ರಮ ನಿರೂಪಿಸಿದರು. ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಚ್.ಬಿ.ದಿನೇಶ್ ಸ್ವಾಗತಿಸಿ, ಕೇರಳ ಚಲಚಿತ್ರ ಅಕಾಡೆಮಿ ಅಧ್ಯಕ್ಷ ಮಹೇಶ್ .ಬಿ.ಪಂಚು ವಂದಿಸಿದರು.